# ವಿವಿಧ ಸಾಧನೆ



❋ ಸಾಧನೆ ಮಾಡುತ್ತ ಮಾಡುತ್ತ ಮುಂದುವರಿದರೆ ಭಗವಂತನ ಕೃಪೆಯಿಂದ ಸಿದ್ಧಿ ದೊರೆಯುತ್ತದೆ. ಆದರೆ ಮೊದಲು ಸ್ವಲ್ಪ ಕಷ್ಟ ಪಡಬೇಕು; ಬಳಿಕ ಆತನ ದರ್ಶನ ದೊರೆಯುತ್ತದೆ. ಆನಂದ ದೊರೆಯುತ್ತದೆ. ಯಾವುದೋ ಒಂದು ಜಾಗದಲ್ಲಿ ಚಿನ್ನದ ನಾಣ್ಯಗಳ ತಪ್ಪಲೆಯನ್ನು ಹೂತಿಟ್ಟಿದೆ ಎಂದು ಕೇಳಿದೊಡನೆಯೇ ಜನ ಅಲ್ಲಿಗೆ ಹೋಗಿ ಅಗೆಯಲು ಶುರು ಮಾಡುತ್ತಾರೆ. ಅಗೆಯುತ್ತ ಅಗೆಯುತ್ತ ಮುಖದಿಂದ ಬೆವರು ಸುರಿಯತೊಡಗುತ್ತದೆ. ಬಹಳವಾಗಿ ಮಣ್ಣನ್ನು ತೋಡಿದ ನಂತರ ಗುದ್ದಲಿ ಮೊನೆಗೆ ಏನೋ ತಗುಲಿ 'ಠಣ್' ಅಂತ ಶಬ್ದ ಮಾಡುತ್ತದೆ. ಬಳಿಕ ಗುದ್ದಲಿಯನ್ನು ಒಂದು ಕಡೆಗೆ ಬಿಸುಟು ತಪ್ಪಲೆಗಾಗಿ ಹುಡುಕುತ್ತಾರೆ. ತಪ್ಪಲೆ ಕಣ್ಣಿಗೆ ಬಿದ್ದೊಡನೆಯೇ ಆನಂದದಿಂದ ಕುಣಿದು ಕುಪ್ಪಳಿಸುತ್ತಾರೆ. ಬಳಿಕ ತಪ್ಪಲೆಯನ್ನು ಹೊರತೆಗೆದು ನಾಣ್ಯಗಳನ್ನು ಹೊರಕ್ಕೆ ಸುರಿದುಕೊಳ್ಳುತ್ತಾರೆ. ಅನಂತರ ಅವನ್ನು ಕೈಯಲ್ಲಿ ತೆಗೆದುಕೊಂಡು ಎಣಿಸಲಾರಂಭಿಸುತ್ತಾರೆ. ಆಗ ಏನು ಆನಂದ! ದರ್ಶನ-ಸ್ಪರ್ಶನ, ಏನು ಹೇಳುತ್ತೀಯೆ?

❋ ಯೋಗದ ವಿಷಯವಾಗಿ ನಿನಗೆ ಸಂಕ್ಷಿಪ್ತವಾಗಿ ತಿಳಿಸಬೇಕಾಗಿದೆ. ಆದರೆ ನೋಡು, ಮೊಟ್ಟೆಯೊಳಗೆ ಮರಿ ಚೆನ್ನಾಗಿ ಬೆಳೆಯದವರೆಗೆ ತಾಯಿ ಹಕ್ಕಿ ಮೊಟ್ಟೆಯನ್ನು ಒಡೆಯುವುದಿಲ್ಲ. ಸಕಾಲ ಬಂದಾಗ ಮಾತ್ರವೇ ಹಕ್ಕಿ ಮೊಟ್ಟೆಯನ್ನು ಒಡೆಯುತ್ತದೆ. ಆದರೆ ಸ್ವಲ್ಪ ಸಾಧನೆ ಮಾಡುವ ಅಗತ್ಯವಿದೆ. ಗುರುವೇ ಎಲ್ಲವನ್ನೂ ಮಾಡುತ್ತಾನೆ-ಆದರೆ ಕೊನೆಯಲ್ಲಿ ಶಿಷ್ಯನ ಕೈಯಲ್ಲೂ ಸ್ವಲ್ಪ ಸಾಧನೆ ಮಾಡಿಸುತ್ತಾನೆ. ದೊಡ್ಡ ಮರವನ್ನು ಕತ್ತರಿಸುವಾಗ ಅದರ ಬುಡವನ್ನು ಬಹುಮಟ್ಟಿಗೆ ಕತ್ತರಿಸಿದೊಡನೆಯೇ ಸ್ವಲ್ಪ ದೂರ ಸರಿದು ನಿಲ್ಲಬೇಕಾಗುತ್ತದೆ. ಬಳಿಕ ಮರ ತಾನೇ 'ಕಟ್, ಕಟ್' ಅಂತ ಮುರಿದು 'ಧಪ್' ಅಂತ ಬೀಳುತ್ತದೆ.

❋ ಅಹಂಕಾರ, ಉಪಾಧಿ ಇವುಗಳನ್ನೆಲ್ಲಾ ತ್ಯಜಿಸಿದರೇನೇ ಭಗವಂತನ ದರ್ಶನ ಮಾಡಲು ಸಾಧ್ಯ. 'ನಾನು ಪಂಡಿತ', 'ನಾನು ಅಂಥ ದೊಡ್ಡ ಮನುಷ್ಯನ ಮಗ', 'ನಾನು ಧನಿಕ', 'ನಾನು ಅಂಥಾ ಕೀರ್ತಿವಂತ'— ಇವೇ ಮೊದಲಾದ ಉಪಾಧಿಗಳೆಲ್ಲಾ ನಮ್ಮನ್ನು ಬಿಟ್ಟು ತೊಲಗಿದೊಡನೆಯೇ ಭಗವಂತನ ದರ್ಶನ ದೊರೆಯುತ್ತದೆ.

❋ ಭಗವಂತನನ್ನು ಧ್ಯಾನಿಸಬೇಕಾದರೆ ಮೊದಲು ಉಪಾಧಿಶೂನ್ಯ ಭಗವಂತನನ್ನು ಧ್ಯಾನಿಸಲು ಪ್ರಯತ್ನಮಾಡಬೇಕು. ಆತ ನಿರುಪಾಧಿಕ, ವಾಙ್ಮನಾತೀತ. ಆದರೆ ಈ ವಿಧದ ಧ್ಯಾನದಿಂದ ಮುಕ್ತಿಯನ್ನು ಪಡೆಯುವುದು ಬಹಳ ಕಷ್ಟ.

❋ ಆದರೆ ಯಾವಾಗ ಭಗವಂತ ಮನುಷ್ಯನಾಗಿ ಅವತರಿಸುತ್ತಾನೊ ಆಗ ಆತನ ಮೇಲೆ ಧ್ಯಾನ ಮಾಡುವುದು ಬಹಳ ಸುಲಭ. ಹೌದು, ಅವತಾರಪುರುಷ ಬೇರೆ ಏನೂ ಅಲ್ಲ, ಸಾಕ್ಷಾತ್ ಭಗವಂತನೇ ಮನುಷ್ಯರೂಪ ಧರಿಸುವಿಕೆ. ದೇಹ ಕೇವಲ ಆವರಣ ಮಾತ್ರ. ಇದು ಲಾಟೀನಿನ ಒಳಗೆ ದೀಪ ಉರಿಯುತ್ತಿರುವ ಹಾಗೆ ಅಥವಾ ಗಾಜಿನ ಪೆಟ್ಟಿಗೆಯಲ್ಲಿ ಅಮೂಲ್ಯ ವಸ್ತುಗಳು ಕಾಣಬರುವ ಹಾಗೆ.

❋ **ಭಕ್ತ :** ಎಲ್ಲಾ ಮಾರ್ಗಗಳೂ ಸತ್ಯ ಎಂದು ಅರಿಯುವ ಬಗೆ ಹೇಗೆ?

**ಶ್ರೀರಾಮಕೃಷ್ಣರು:** ಯಾವುದಾದರೂ ಒಂದು ಮಾರ್ಗವನ್ನು ಸರಿಯಾಗಿ ಅನುಸರಿಸಿ ಮುಂದುವರಿದುದೇ ಆದರೆ ಭಗವಂತನನ್ನು ಮುಟ್ಟಬಹುದು. ಬಳಿಕ ಎಲ್ಲಾ ಮಾರ್ಗಗಳ ಸುದ್ದಿ ಸಮಾಚಾರಗಳನ್ನೂ ತಿಳಿದುಕೊಳ್ಳಬಹುದು. ಒಮ್ಮೆ ಹೇಗೋ ಮಾಡಿ ಚಾವಣಿಯ ಮೇಲಕ್ಕೆ ಹತ್ತಿಬಿಟ್ಟಿದ್ದೇ ಆದರೆ, ಬಳಿಕ ಬೇಕಾದರೆ ಮರದ ಹಂತಗಳ ಮೂಲಕ ಅಥವಾ ಬೊಂಬಿನ ಮೂಲಕ ಅಥವಾ ಹಗ್ಗದ ಮೂಲಕ ಕೆಳಕ್ಕೆ ಇಳಿದು ಬಂದುಬಿಡಬಹುದು.

❋ ಭಗವಂತನ ಕೃಪೆಯೊಂದೊದಗಿತು ಎಂದರೆ ಭಕ್ತ ಎಲ್ಲವನ್ನೂ ಅರಿತುಕೊಳ್ಳಬಲ್ಲ. ಆತನ ಸಾಕ್ಷಾತ್ಕಾರ ಒಮ್ಮೆ ದೊರೆಯಿತು ಎಂದರೆ, ಎಲ್ಲವನ್ನೂ ಅರಿತುಕೊಳ್ಳಲು ಸಾಧ್ಯ. ಒಮ್ಮೆ ಹೇಗಾದರೂ ಮಾಡಿ ಮನೆಯ ಯಜಮಾನನನ್ನು ಸಂಧಿಸಿ ಆತನ ಸ್ನೇಹ ಬೆಳೆಸಿಬಿಟ್ಟಿದ್ದೇ ಆದರೆ ಆತನೇ ಹೇಳಿಬಿಡುತ್ತಾನೆ ತನಗೆಷ್ಟು ತೋಟತುಡಿಕೆಗಳಿವೆ, ಕೆರೆಕಟ್ಟೆಗಳಿವೆ, ಲೇವಾದೇವಿ ಪತ್ರಗಳಿವೆ ಎಂಬುದನ್ನು.

❋ **ಭಕ್ತ :** ಏನು ಮಾಡಿದರೆ ಭಗವಂತನ ಕೃಪೆಯೊದಗುತ್ತದೆ?

**ಶ್ರೀರಾಮಕೃಷ್ಣರು:** ಭಗವಂತನ ನಾಮಗುಣಕೀರ್ತನೆಯನ್ನು ಸರ್ವದಾ ಮಾಡುತ್ತಿರಬೇಕು. ವಿಷಯಚಿಂತನೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತ್ಯಜಿಸಬೇಕು. ನೀನು ಬೆಳೆ ಬೆಳೆಯಲು ಬಹಳ ಶ್ರಮವಹಿಸಿ ಗದ್ದೆಗೆ ನೀರು ತರಬಹುದು. ಆದರೆ ತೆವರಿಯಲ್ಲಿರುವ ಬಿಲಗಳ ಮೂಲಕ ನೀರೆಲ್ಲಾ ಹೊರಕ್ಕೆ ಹರಿದು ಹೋಗಿಬಿಡುತ್ತದೆ ಅಂತ ಇಟ್ಟುಕೋ. ಆಗ ನಾಲೆ ತೋಡಿ ನೀರು ತಂದದ್ದೆ ವೃಥಾ ಪರಿಶ್ರಮ.

❋ ಮುಖ್ಯವಾದುದೇನೆಂದರೆ ಭಗವಂತನನ್ನು ಪ್ರೀತಿಸಬೇಕು. ಅಗಾಧ ಪ್ರೀತಿಯುಂಟಾಯಿತು ಎಂದರೆ, ಆತನ ದರ್ಶನ ದೊರೆಯುತ್ತದೆ.

'ಶ್ರೀರಾಮಕೃಷ್ಣ ವಚನವೇದ'ದಿಂದ